# ಬ್ಯಾರಿ ಬದುಕಿನ ತಲ್ಲಣಗಳು

-ಅತ್ತೂರು ಚೈಯಬ್ಬ, ಬೆಂಗಳೂರು.

ದಕ್ಷಿಣ ಕನ್ನಡದ ಸಾಂಸ್ಕೃತಿಕ ಪರಂಪರೆಯಲ್ಲಿ ಬ್ಯಾರಿಗಳಿಗೊಂದು ವಿಶೇಷ ಸ್ಥಾನವಿದೆ. ಭಾಷೆ, ಸಂಸ್ಕೃತಿ ಉದ್ಯೋಗ, ಧಾರ್ಮಿಕ ನಂಬಿಕೆಗಳು ಹೀಗೆ ಎಲ್ಲವುಗಳಲ್ಲೂ ಬ್ಯಾರಿಗಳು ತಮ್ಮದೇ ಆದ ಒಂದು ವಿಶಿಷ್ಠ ಪರಂಪರೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಇಲ್ಲಿನ ಸಂಸ್ಕೃತಿ, ಭಾಷೆ, ಜನ ಜೀವನದೊಂದಿಗೆ ಅವರು ಸಮರಸರಾಗಿ ಬೆರೆತು ಬದುಕಿದ್ದರೂ ಅದರೊಂದಿಗೆ ತಮ್ಮದೇ ಆದ ಒಂದು ವಿಶಿಷ್ಠ ಅಸ್ತಿತ್ವವನ್ನೂ ಉಳಿಸಿಕೊಂಡು ಬಂದಿದ್ದಾರೆ. ತುಳು, ಕನ್ನಡ ಭಾಷೆಗಳೆರೆಡನ್ನು ನಿರರ್ಗಳವಾಗಿ ಮಾತನಾಡಬಲ್ಲ ಬ್ಯಾರಿಗಳು ಈ ನೆಲದ ಭಾಷಾ ಸಾಮರಸ್ಯ ಹಾಗೂ ಸಾಂಸ್ಕೃತಿಕ ಹೊಂದಾಣಿಕೆಗಳಿಗೆ ನೀಡಿದ ಕೊಡುಗೆಗಳು ಅನನ್ಯವಾದದು. ತಮ್ಮ ಭಾಷೆ ಹಾಗೂ ಸಂಸ್ಕೃತಿಗಳನ್ನು ಉಳಿಸಿಕೊಳ್ಳುವುದರ ಜೊತೆಗೆ ಇತರ ಭಾಷೆ ಹಾಗೂ ಸಂಸ್ಕೃತಿಗಳ ಅಪಾರವಾದ ಅಭಿಮಾನವನ್ನು ಅವರು ಬೆಳೆಸಿಕೊಂಡಿದ್ದಾರೆ. ಇದಕ್ಕೆ ಅಪಾರವಾದ ಐತಿಹಾಸಿಕ ಉದಾಹರಣೆಗಳಿವೆ.

ಬ್ಯಾರಿಗಳು ಇಲ್ಲಿನ ಎಲ್ಲಾ ಜನವರ್ಗಗಳಂತೆಯೇ ಬದುಕಿದವರು. ಎಲ್ಲಾ ಬಗೆಯ ಜೀವನೋಪಾಯ ಹಾಗೂ ಕಸಬುಗಳಿಗೂ ತಮ್ಮನ್ನು ತೆರೆದಿಟ್ಟುಕೊಂಡವರು. ಯಾವುದೇ ಉದ್ಯೋಗವನ್ನು ಕೀಳರಿಮೆಯಿಂದ ಕಂಡವರಲ್ಲ. ಹಾಗಾಗಿ ಬ್ಯಾರಿಗಳಲ್ಲಿ ಕಸಬುಗಳ ಬಗ್ಗೆ ಮೇಲು ಹಾಗೂ ಕೀಳೆಂಬ ಭಾವನೆಗಳಿಲ್ಲ. ಬ್ಯಾರಿಗಳು ತಮ್ಮ ಬದುಕಿನಲ್ಲಿ ಅನುಭವಿಸುತ್ತಿರುವ ತಲ್ಲಣ, ಸಮಸ್ಯೆಗಳು ಇತರರಿಗಿಂತ ತುಂಬಾ ಭಿನ್ನವಾದುದೇನೂ ಅಲ್ಲ. ಆದರೆ ಅವರ ಧಾರ್ಮಿಕ ನಂಬಿಕೆಗಳು, ಕಟ್ಟುಪಾಡುಗಳು, ಭಾವನಾ ಶೈಲಿ, ಔದ್ಯೋಗಿಕ ಏಳು-ಬೀಳುಗಳು, ವ್ಯಾಪಾರದ ಉತ್ಥಾನ ಪತನಗಳು, ಆಚರಣೆಗಳು. ಇವೆಲ್ಲವುಗಳ ಹಿನ್ನೆಲೆಯಲ್ಲಿ ಇವರ ಬದುಕಿನ ತಲ್ಲಣಗಳನ್ನು ನಾವು ಪ್ರಾಮಾಣಿಕವಾಗಿ ವಿಶ್ಲೇಷಿಸಿದರೆ ನಮಗೆ ಕೆಲವೊಂದು ವಿಶಿಷ್ಟ ಅಂಶಗಳು ಗೋಚರಿಸುತ್ತವೆ.

ಬ್ಯಾರಿಗಳ ಮೂಲ ಕಸಬು ವ್ಯಾಪಾರ ಹಾಗಾಗಿ "ಬ್ಯಾರ" ಎಂಬ ತುಳು ಪದದಿಂದ "ಬ್ಯಾರಿ" ಎಂಬುವುದು ಉತ್ಪನ್ನವಾಯಿತೆಂದು ಕೆಲವು ಇತಿಹಾಸಕಾರರು ಅಭಿಪ್ರಾಯಪಡುತ್ತಾರೆ. "ಬ್ಯಾರಿ" ಒಬ್ಬ ವ್ಯಾಪಾರಿಯಾಗಿ ಗುರುತಿಸಿಕೊಂಡಷ್ಟು ಇತರ ಇತರ ಉದ್ಯೋಗಗಳೊಂದಿಗೆ ಗುರುತಿಸಿಕೊಂಡಲ್ಲ. ವ್ಯಾಪಾರದ ಮಟ್ಟಿಗೆ ಬ್ಯಾರಿಗಳಲ್ಲಿ ದೊಡ್ಡ ಮತ್ತು ಸಣ್ಣ ಉದ್ಯೋಗಗಳೆಂಬ ಭೇದವಿಲ್ಲ. ವ್ಯಾಪಾರದ ಯಾವುದೇ ಕ್ಷೇತ್ರ ಅವರಿಂದ ಹೊರತಾದದೂ ಇಲ್ಲ. ಸಣ್ಣ ವ್ಯಾಪಾರದಿಂದ ಬೃಹತ್ ಉದ್ಯಮಗಳ ತನಕವೂ ಅವರೂ ಹರಡಿಕೊಂಡಿದ್ದಾರೆ. ಮೀನು ವ್ಯಾಪಾರ, ಮೀನು ಹಿಡಿಯುವುದು, ಮೀನಿನ ರಫ್ತು, ಹಣ್ಣು-ಹಂಪಲು, ತರಕಾರಿ, ಅಡಿಕೆ, ಚಿಲ್ಲರೆ ಮತ್ತು ರಖಂ ವ್ಯವಹಾರ, ಬೀದಿ ಬದಿಯ ವ್ಯಾಪಾರ, ಬೀಡಿ ಅಂಗಡಿ, ಜಾನುವಾರು ವ್ಯಾಪಾರ, ಕೋಳಿ-ಮಾಂಸದ ಅಂಗಡಿ ಹೀಗೆ ವ್ಯಾಪಾರದ ಎಲ್ಲಾ ಸ್ತರಗಳೂ, ಎಲ್ಲಾ ಕ್ಷೇತ್ರಗಳು ಬ್ಯಾರಿಗಳಿಗೆ ಲೀಲಾಜಾಲ. ಈ ವ್ಯಾಪಾರಗಳು ಹಾಗೂ ವ್ಯವಹಾರಗಳು ಎಲ್ಲೆಲ್ಲಿ ಪೆಟ್ಟು ತಿನ್ನಬೇಕಾಗಿ ಬಂತೋ ಅಲ್ಲೇಲ್ಲಾ ಬ್ಯಾರಿಗಳು ಪೆಟ್ಟು ತಿಂದಿದ್ದಾರೆ. ಉದಾಹರಣೆಗಾಗಿ ಬೀಡಿ ಉದ್ಯಮ. ಇಂದು ಬೀಡಿ ಉದ್ಯಮ ಅವನತಿಯ ಹಂತದಲ್ಲಿದೆ. ಬ್ಯಾರಿ ಸಮುದಾಯದ ಮುಖ್ಯವಾಗಿ ಬಡವರ್ಗದ, ಜೀವನೋಪಾಯ ಬೀಡಿಯಾಗಿತ್ತು. ಇಂದು ಅವನತಿ ಹೊಂದಿದಾಗ ಇದಕ್ಕೆ ಬದಲಾದ ಇದೇ ಬಗೆಯ ಬೇರೊಂದು ಉದ್ಯೋಗ ಹುಟ್ಟಲಿಲ್ಲ. ಹಾಗಾಗಿ ಬೀಡಿ ಉದ್ಯಮದ ಅವನತಿ ಬ್ಯಾರಿಗಳಿಗೆ ಆಘಾತಕಾರಿಯಾಯಿತು. ಬ್ಯಾರಿ ಹೆಣ್ಣುಮಕ್ಕಳು ನಿರುದ್ಯೋಗಿಗಳಾದರು. ಇದು ಬ್ಯಾರಿಗಳ ಆರ್ಥಿಕ ಬದುಕಿನಲ್ಲಿ ಹಲವು ತಲ್ಲಣಗಳಿಗೆ ಕಾರಣವಾಯಿತು. ಹಾಗೆಯೇ ಪ್ರಚಲಿತ ಬೇರೆ-ಬೇರೆ ವಿದ್ಯಮಾನಗಳಿಂದಾಗಿ "ಜಾನುವಾರು" ವ್ಯಾಪಾರದೊಂದಿಗೆ ಗುರುತಿಸಿಕೊಂಡು ತಮ್ಮ ಜೀವನೋಪಾಯ ಬ್ಯಾರಿಗಳ ಒಂದು ವರ್ಗ ಈ ವ್ಯಾಪಾರ ಮಾಡಲಾಗದ ಸ್ಥಿತಿಯಲ್ಲಿದೆ. ಈ ಭಾಗದ ಎಲ್ಲಾ ರೈತರು ಇವರನ್ನು ಸಂಪೂರ್ಣವಾಗಿ ಅವಲಂಬಿಸಿದ್ದರು ಮತ್ತು ಕೃಷಿ

ಚಟುವಟಿಕೆಯಲ್ಲಿ ಬ್ಯಾರಿಗಳ ಕೊಡುಗೆಯೂ ಅಪಾರವಾದದ್ದು. ಉಳುಮೆಗಾಗಿ ಎತ್ತು, ಕೋಣಗಳು,ಜೋಡೆತ್ತುಗಳನ್ನು ರೈತರಿಗೆ ಒದಗಿಸಿ, ಅವರಿಂದ ಗೊಡ್ಡೆತ್ತು, ಗೊಡೆಮ್ಮೆ, ಅಂಗವಿಕಲ ಜಾನುವಾರುಗಳನ್ನು ಖರೀದಿಸಿ, "ಮಾಂಸದ ವ್ಯಾಪಾರವನ್ನು ತಲ-ತಲಾಂತರದಿಂದ ಮಾಡುತ್ತಿದ್ದರು.

ಬ್ಯಾರಿಗಳು ತಮ್ಮ ಭವಿಷ್ಯದ ಅನಿಶ್ಚಿತತೆಯನ್ನು ಹೋಗಲಾಡಿಸುವ ನಿಟ್ಟಿನಲ್ಲಿ ತಮ್ಮನ್ನು ವಿಮಾ ಯೋಜನೆಗಳಿಗೆ ಹಾಗೂ ರಾಷ್ಟ್ರೀಕೃತ ಹಣಕಾಸು ವ್ಯವಸ್ಥೆಯ ಉಪಯೋಗ ಪಡೆಯುವುದು ಇಂದಿನ ಮುಖ್ಯವಾದ ಅಗತ್ಯವೂ ಆಗಿದೆ.

ಬ್ಯಾರಿಗಳಲ್ಲಿ ಅತೀ ಶ್ರೀಮಂತರು ಇದ್ದಾರೆ. ಹಾಗೆಯೇ  ದಟ್ಟ ದರಿದ್ರುರೂ ಇದ್ದಾರೆ. ಆದರೆ ದುಂದುವೆಚ್ಚದಲ್ಲಿ ಬ್ಯಾರಿಗಳದ್ದು ಎತ್ತಿದ ಕೈ. ಅನುತ್ಪಾದಕ ವೆಚ್ಚಗಳನ್ನು ಸಾಮಾಜಿಕ ಪ್ರತಿಷ್ಠೆಗಾಗಿ ಮಾಡುವುದರಲ್ಲಿ ಅವರೆಂದೂ ಹಿಂದೆ ಬೀಳುವವರಲ್ಲ. ಈ ದುಂದುಗಾರಿಕೆಯೇ ಅವರ ಸ್ವಯಂಕೃತ ಅವನತಿಯ ಮೂಲಕಾರಣವೂ ಹೌದು. ಮದುವೆ, ಮುಂಜಿ, ಮದುವೆ ಮುನ್ನಾದಿನದ ಮೈಲಾಂಜಿ ಇವೆಲ್ಲವುಗಳನ್ನು ತಮ್ಮ ಪ್ರತಿಷ್ಠೆ ಪ್ರದರ್ಶನದ ವೇದಿಕೆಗಳೆಂದು ಭಾವಿಸುವ ಅವರು ಈ ಕಾರ್ಯಕ್ರಮಗಳಿಗಾಗಿ ಅನಾವಶ್ಯಕ ವೆಚ್ಚಮಾಡಿ ಸಾಲಗಾರರಾಗುವುದಕ್ಕೆ ಹೇಸುವುದಿಲ್ಲ. ಮದುವೆ-ಮುಂಜಿಗಳಲ್ಲಿ ಆಗುವ ಅನಾವಶ್ಯಕ ದುಂದುಗಾರಿಕೆಗಳು ನಿಂತಲ್ಲಿ ಬ್ಯಾರಿಗಳ ಆರ್ಥಿಕ ಸಮಸ್ಯೆಗಳು ಬಹುಪಾಲು ನಿಂತಂತೆಯೇ ಸರಿ.

ಇಸ್ಲಾಮಿನ ಅತ್ಯಂತ ಅಪರಿಚಿತವಾದ ವರದಕ್ಷಿಣೆ ಬ್ಯಾರಿಗಳಲ್ಲಿ ಇಂದೂ ಜೀವಂತವಿದೆ. ಇದು ಬೇರೆ ಬೇರೆ ರೂಪಗಳಲ್ಲಿ ಚಾಲ್ತಿಯಲ್ಲಿದೆ ಹಣ, ಬಂಗಾರ, ಫ್ಲಾಟು ಎಲ್ಲವೂ ಇದರಲ್ಲಿ ಇರುತ್ತದೆ. ಶ್ರೀಮಂತ ವರ್ಗದ ಶ್ರೀಮಂತಿಕೆಯ ಮೆರೆದಾಟಕ್ಕೆ ವಸ್ತುವಾದ ವರದಕ್ಷಿಣೆ ಪದ್ಧತಿ ಬಡ ಹೆಣ್ಣು ಹೆತ್ತವರ ರಕ್ತ ಹೀರುತ್ತಿದೆ. ಮದುವೆಗಳನ್ನು ಸರಳವಾಗಿ ಮಾಡುವ ಕ್ರಮಕ್ಕೆ ಬ್ಯಾರಿಗಳು ಇನ್ನೂ ಹೊಂದಿಕೊಳ್ಳುತ್ತಿಲ್ಲ. ವರದಕ್ಷಿಣೆ ಮತ್ತು ಮದುವೆಯ ದುಂದುವೆಚ್ಚ ಬ್ಯಾರಿ ಬದುಕಿನಲ್ಲಿ ಅಸಹನೀಯ, ಅನಪೇಕ್ಷಿತ ಯಾತನೆಗಳನ್ನು ಹುಟ್ಟುಹಾಕಿದೆ.  ದುಂದುವೆಚ್ಚವನ್ನು ನಿಗ್ರಹಿಸುವ, ದುಂದುಗಾರಿಕೆಗೆ ಕಡಿವಾಣ ಹಾಕುವ ಯಾವ ಸಾಮಾಜಿಕ ಜಾಗೃತಿಯ ಕಾರ್ಯಕ್ರಮಗಳು ಇಂದು ನಡೆಯುತ್ತಿಲ್ಲ. ದುಂದು ವೆಚ್ಚವೇ ಪ್ರತಿಷ್ಠೆ ಹಾಗೂ ಸಾಮಾಜಿಕ ಸ್ಥಾನ-ಮಾನವಾಗುತ್ತಿರುವ ಭ್ರಮೆಗೆ ಬ್ಯಾರಿಗಳು ತಮ್ಮನ್ನೇ ತಾವು ತೆತ್ತುಕೊಳ್ಳುವ ಸ್ವಯಂಕೃತ ದುರ್ದೆಶೆಗೆ ಮತ್ತೆ ಮತ್ತೆ ಬಲಿಪಶುಯಾಗುತ್ತಿರುವುದು, ಇದಕ್ಕೆ ಪ್ರೇರಣೆಯಾದ ಸಾಮಾಜಿಕ ಜಾಗೃತಿ ಮೂಡಿಸುವವರ ಯತ್ನದಲ್ಲಿ ಪ್ರಾಮಾಣಿಕ ಬದ್ಧತೆಯಿಲ್ಲದಿರುವುದು ಬ್ಯಾರಿಗಳ ಪ್ರಸಕ್ತ ಸಾಮಾಜಿಕ ಬದುಕಿನ ಒಂದು ದುರಂತವಾಗಿದೆ ಅಲ್ಲಲ್ಲಿ ನಡೆಯುತ್ತಿರುವ ಸರಳ ವಿವಾಹ ಕಾರ್ಯಕ್ರಮಗಳ ವೇದಿಕೆಗಳಲ್ಲಿ ಸರಳವಿವಾಹಗಳ ಬುರುಡೆ ಬಿಡುವ ಕೆಲವು ನೇತಾರರು ಮತ್ತು ಧಾರ್ಮಿಕ ಮುಖಂಡರು ತಮ್ಮ ಮಕ್ಕಳ ಮದುವೆಯನ್ನು ಅದ್ದೂರಿಯಿಂದ ಮಾಡಿ ತಮ್ಮ ಪ್ರಾಮಾಣಿಕತೆ ಮೆರೆಯುವುದನ್ನು ಕಾಣುವಾಗಿ ಬ್ಯಾರಿಗಳಲ್ಲಿ ಈ ಬಗ್ಗೆ ಒಂದು ಸ್ವಯಂ ಜಾಗೃತಿಯ ಅತ್ಮಾರ್ಥ ಹೋರಾಟಕ್ಕೆ ಹುಟ್ಟುಹಾಕುವ ಪ್ರಜ್ಞಾವಂತ ಚಳುವಳಿಯ ಅಗತ್ಯವಿದೆ ಎಂದೆನಿಸುತ್ತದೆ.

ಬ್ಯಾರಿಗಳ ಬದುಕನ್ನು ಸೂಕ್ಷ್ಮವಾಗಿ ವಿವೇಚಿಸಿದಾಗ ಬ್ಯಾರಿ ಮಹಿಳೆಯರು ಆಧುನಿಕ ವಾಣಿಜ್ಯಕೃತ ಕೊಳ್ಳುಬಾಕ ಸಂಸ್ಕೃತಿಗೆ ಬೇಗನೇ ಬಲಿ ಬೀಳುತ್ತಿದ್ದಾರೆ. ಅವರ "ಗಲ್ಫ್" ಸಂಪಾದನೆಯ ಬಹುಪಾಲು ಇಂತಹ ಆಕರ್ಷಣೀಯ ದುಂದುವೆಚ್ಚಗಳಿಗೆ ಪೋಲಾಗುತ್ತಿದೆ. ಬದುಕಿನ ಖರ್ಚು-ವೆಚ್ಚಗಳನ್ನು ಅತ್ಯಂತ ಯೋಜನಾತ್ಮಕವಾಗಿ ನಿರ್ವಹಿಸುವ ಜಾಣ್ಮೆ ಅವರಲ್ಲಿ ಕಡಿಮೆ. ತಮ್ಮ ಮಕ್ಕಳ ಭವಿಷ್ಯವನ್ನು ರೂಪಿಸುವಷ್ಟು ಅವರು ಪಕ್ವವಾಗಿಲ್ಲ.

ಬ್ಯಾರಿಗಳಲ್ಲಿ ಗಂಡಸರಷ್ಟೇ ದುಡಿಯುತ್ತಿರುವುದರಿಂದ ಮಹಿಳೆಯರು ದುಂದುಗಾರಿಕೆ ಮತ್ತು ಅನುತ್ಪಾದಕ ಖರ್ಚುಗಳ ಮೂಲಕ ಒಟ್ಟು ಕುಟುಂಬ ನಿರ್ವಹಣೆಯನ್ನು ರಚನಾತ್ಮಕವಾಗಿ ನಿರ್ವಹಿಸುವಲ್ಲಿ ವಿಫಲರಾಗುತ್ತಿದ್ದಾರೆ.

ಒಂದು ಕಾಲದಲ್ಲಿ ಬ್ಯಾರಿಗಳಲ್ಲಿ ಅತ್ಯುತ್ತಮ ಸೌಹಾರ್ದತೆಯಿತ್ತು. ಇಂದು ರಾಜಕೀಯ ಮತ್ತು ಧರ್ಮ ಸೂಕ್ಷ್ಮಗಳ ಗೊಂದಲಗಳು ಬ್ಯಾರಿಗಳನ್ನು ವಿಭಜಿಸಿದೆ. ಬ್ಯಾರಿಗಳಲ್ಲಿ ಕೆಲವು ಸಮಯ ಸಾಧಕ ರಾಜಕಾರಣಿಗಳಿಂದಾಗಿ ಬ್ಯಾರಿಗಳಲ್ಲಿ ಐಕ್ಯಮತ್ಯ ಮತ್ತು ಸೌಹಾರ್ದತೆಗೆ ತೊಡಕಾಗುತ್ತದೆ. ಬ್ಯಾರಿಗಳ ದೊಡ್ಡ ವರ್ಗವೊಂದು ಜೀವನೋಪಾಯಕ್ಕಾಗಿ ಗಲ್ಫ್ ರಾಷ್ಟ್ರಗಳಲ್ಲಿ ದುಡಿಯುತ್ತಿದೆ. ವಿದ್ಯಾವಂತರು ಉದ್ಯೋಗ ನಿಮಿತ್ತ ರಾಷ್ಟ್ರದ ಬೇರೆ ಬೇರೆ ಕಡೆ ಜೀವಿಸುತ್ತಿದ್ದಾರೆ. ಬಹುತೇಕ ಅವಿದ್ಯಾವಂತರಾದ ಬ್ಯಾರಿ ಮಹಿಳೆಯರು ರಾಜಕೀಯ ಆಗು-ಹೋಗುಗಳ ಬಗ್ಗೆ ನಿರಾಸಕ್ತರಾಗಿದ್ದಾರೆ. ಇವರೊಂದಿಗೆ ಬ್ಯಾರಿಗಳಲ್ಲೇ ಒಡಕು ಹುಟ್ಟಿಸಿ ರಾಜಕೀಯ ಬೇಳೆ ಬೇಯಿಸುತ್ತಿರುವ ಸಮಯ ಸಾಧಕತನ ರಾಜಕಾರಣದಿಂದಾಗಿ ಬ್ಯಾರಿಗಳು ಇಂದು ಒಂದು ಪ್ರಬಲ ರಾಜಕೀಯ ಶಕ್ತಿಯಾಗಿ ಉಳಿದಿಲ್ಲ. ಇದರ ಜೊತೆಗೆ ಬ್ಯಾರಿಗಳಲ್ಲಿ ಪ್ರಜ್ಞಾವಂತ ನಿಸ್ವಾರ್ಥ ನಾಯಕತ್ವದ ಕೊರತೆ ಅಪಾರವಿದೆ. ಕೋಮುವಾದದ ರಾಜಕೀಯ ಹುಟ್ಟು ಹಾಕುತ್ತಿರುವ ದುರಂತಕ್ಕೆ ಬ್ಯಾರಿಗಳು ನಿರಂತರ ಬಲಿಯಾಗುತ್ತಿದ್ದಾರೆ. ಪ್ರಜಾಸತ್ತಾತ್ಮಕ, ಜಾತ್ಯಾತೀತ ಸಮಾಜವಾದಿ ಚಿಂತನೆಯ ಅಭ್ಯರ್ಥಿಗಳ ಆಯ್ಕೆಯಲ್ಲಿ ತಮ್ಮ ಮತವನ್ನು ಕ್ರೋಢೀಕರಿಸಿ ಅಂತಹ ಅಭ್ಯರ್ಥಿಗಳು ಗೆಲುವು ಸಾಧಿಸುವಂತೆ ಮಾಡುವ ತಂತ್ರಗಾರಿಕೆಯಲ್ಲಿ ಅವರು ಸೋಲುತ್ತಿದ್ದಾರೆ. ಹಾಗಾಗಿ ಕೊನೆಗೆ ಅವರೂ ಅಸಹಾಯಕರಾಗಿ ಕೋಮುವಾದಿ ರಾಜಕಾರಣಕ್ಕೆ ಪರೋಕ್ಷವಾಗಿ ನೆರವಾಗುವಂತಾಗುತ್ತದೆ.

ಎಲ್ಲಕ್ಕಿಂತ ಮುಖ್ಯವಾಗಿ ಬ್ಯಾರಿಗಳಲ್ಲಿ ಹಿಂದೆ ಇದ್ದಂತಹ ಸೌಹಾರ್ದತೆ ಇಂದು ಉಳಿದಿಲ್ಲ ಎಂಬುವುದರತ್ತ ಒಂದು ಪ್ರಾಮಾಣಿಕ ನೋಟ ಇಂದು ಅಗತ್ಯವಾಗಿದೆ. ಧಾರ್ಮಿಕವಾಗಿ ಬೆಳೆದು ಬಂದ ಕೆಲವು ವಿಭಿನ್ನ ಚಿಂತನೆಗಳು ಬ್ಯಾರಿಗಳ ಐಕ್ಯಮತ್ಯ, ಸೌಹಾರ್ದತೆ ಹಾಗೂ ಧಾರ್ಮಿಕ ಒಗ್ಗಟ್ಟಿಗೆ ಮಾರಕವಾಗುತ್ತಿದೆ. ಕೆಲವು ಸೂಕ್ಷ್ಮ ಧಾರ್ಮಿಕ ವಿಚಾರಧಾರೆಗಳಿಂದಾಗಿ ಅವರು ತಾವು ಪ್ರತ್ಯೇಕವಾಗಿ ಗುರುತಿಸಲ್ಪಡುವುದನ್ನು ಬಯಸುವುದರಿಂದ ಹುಟ್ಟಿಕೊಳ್ಳುವ ಗೊಂದಲಗಳು ಜಮಾತ್‌ಗಳನ್ನು ಮಾತ್ರವಲ್ಲ ಬ್ಯಾರಿಕುಟುಂಬಗಳನ್ನು ಅನಪೇಕ್ಷಿತವಾಗಿ ವಿಭಜಿಸಿ ಕುಟುಂಬದ ನೆಮ್ಮದಿಯನ್ನು ಭಂಗಪಡಿಸುತ್ತಿವೆ.ಒಂದೇ ಮೊಹಲ್ಲಾದಲ್ಲಿ ಪ್ರತ್ಯೇಕ ಮಸೀದಿಗಳು ಹುಟ್ಟಿಕೊಂಡು ಅವರು ಮತ್ತೆ ಮತ್ತೆ ವಿಭಜಿತರಾಗಿ ಒಂದು ಸುಂದರ ಸೌಹಾರ್ದ ಬದುಕು ಅವರಲ್ಲಿ ಇತ್ತೀಚೆಗೆ ಮರೀಚಿಕೆಯಾಗುತ್ತಿದೆ.

ಧಾರ್ಮಿಕವಾಗಿ ಒಂದು ಸಮನ್ವಯ ಚಿಂತನೆ, ಸಾಂಘಿಕ ಭಿನ್ನತೆಗಳಿಗೆ ಸಮುದಾಯದ ಹಿತಾಸಕ್ತಿಗೆ ಬಲಿಯಾಗದಂತೆ ನೋಡಿಕೊಳ್ಳುವ ಪ್ರಜ್ಞಾವಂತ ಧಾರ್ಮಿಕ ಪಠ್ಯ-ಪುಸ್ತಕಗಳಂತಹ ಸಾಂಸ್ಥಿಕ ವಿಷಯಗಳಿಗೂ ಸರಕಾರದ ಮೊರೆ ಹೋಗುವ ಹಂತಕ್ಕೆ ಬೆಳೆದಾಗ ಉಂಟಾಗುವ ಗೊಂದಲ ಹಾಗೂ ಅವ್ಯವಸ್ಥೆಗಳ ಅವಾಂತರಗಳ ಬಗ್ಗೆ ನೇತಾರರು ಹಾಗೂ ಅವರ ಧಾರ್ಮಿಕ ಪಂಡಿತರು ಶುದ್ಧ ಚಿತ್ತದಿಂದ ಯೋಚಿಸಿ ಈ ಬಗ್ಗೆ ತಮ್ಮದೇ ಸಾಂಸ್ಥಿಕ ವ್ಯವಸ್ಥೆಯೊಳಗೆ ಇಂತಹ ಗೊಂದಲಗಳಿಗೆ ಪರಿಹಾರ ಕಾಣಬೇಕು.

ಇದರೊಂದಿಗೆ ಇಂದು ಹಲವಾರು ಕಡೆ ಮಸೀದಿಗಳ ಆಡಳಿತ ವ್ಯವಸ್ಥೆಯಲ್ಲಿ ತಲೆದೋರುವ ಬಿಕ್ಕಟ್ಟುಗಳು ನ್ಯಾಯಾಲಯ ಮೆಟ್ಟಿಲೇರಿ ಮಸೀದಿಗಳ ಆಡಳಿತದಲ್ಲೂ ಚುನಾವಣೆ, ತಿಕ್ಕಾಟಗಳ ಅಪ್ರಿಯ ಪ್ರಸಂಗಗಳು ನಡೆಯುತ್ತಿರುತ್ತಿದೆ. ನಾವು ಗಮನಿಸಬೇಕಾದ ವಿಚಾರವೆಂದರೆ ಸೌಹಾರ್ದತೆಯ ಕೇಂದ್ರಗಳಾಗಬೇಕಾದ ಮಸೀದಿಗಳೇ ಹಲವು ಕಡೆ

ವಿವಾದದ, ಬಿಕ್ಕಟ್ಟು, ತಿಕ್ಕಾಟಗಳ ಕೇಂದ್ರವಾಗುತ್ತಿರುವುದು ಒಂದು ದುರಂತ. ಧಾರ್ಮಿಕ ಪ್ರಜ್ಞಾವಂತರಲ್ಲದ, ಧಾರ್ಮಿಕವಾಗಿ ಪ್ರಬುದ್ಧರಾಗಿರದ, ಪ್ರಾಮಾಣಿಕವಾಗಿರದ ಕೆಲವು ಹಿತಾಸಕ್ತಿ ವ್ಯಕ್ತಿಗಳು ಮಸೀದಿಗಳು ಆಡಳಿತಕ್ಕಾಗಿ ಸ್ಪರ್ಧಿಸುವುದು, ತಮ್ಮ ಪ್ರತಿಷ್ಠೆಗಾಗಿ ಸಮುದಾಯವನ್ನು ಒಡೆಯುವುದು, ತಮ್ಮ ವೈಯುಕ್ತಿಕ ಪ್ರತಿಷ್ಠೆಗಾಗಿ ಮಸೀದಿಗಳ ಹಿತವನ್ನು ಬಲಿಗೊಡುವುದು ಹಲವೆಡೆ ಕಂಡುಬರುತ್ತಿದೆ. ಇವೆಲ್ಲವುದರ ಬಗ್ಗೆ ಬ್ಯಾರಿ ಸಮುದಾಯದ ಪ್ರಜ್ಞಾವಂತ ವರ್ಗ ಎಚ್ಚರ ವಹಿಸಬೇಕಾದ ಅಗತ್ಯವಿದೆ.

ಬ್ಯಾರಿಗಳ ಬಗ್ಗೆ ಹೇಳುವಾಗ ಶೈಕ್ಷಣಿಕವಾಗಿ ಅವರಿಂದು ಜಾಗೃತಗೊಂಡಿರುವುದು ಅತ್ಯಂತ ಮಹತ್ವದ ವಿಷಯವಾಗಿರುತ್ತದೆ. ಬ್ಯಾರಿಗಳಲ್ಲಿ ಶೈಕ್ಷಣಿಕವಾಗಿ ನಡೆದ ಮೌನಕ್ರಾಂತಿ ಹಳ್ಳಿ-ಹಳ್ಳಿಗಳಲ್ಲೂ ಅತ್ಯಂತ ಪರಿಣಾಮಕಾರಿಯಾಗಿದೆ. ಮಸೀದಿಯ ಆಡಳಿತವೇ ಈಗ ಅಸ್ಥೆ ವಹಿಸಿರುವುದನ್ನು ಇಲ್ಲಿ ಗಮನಿಸಬೇಕಾದ ಅಂಶ. ಒಂದು ಕಾಲಕ್ಕೆ ಧಾರ್ಮಿಕ ಪರಿಧಿಯೊಳಗೆ ತಮ್ಮ ಹೆಣ್ಣುಮಕ್ಕಳ ಶಿಕ್ಷಣ ಅಸಾಧ್ಯ ಎಂಬ ಭ್ರಮೆ ಬ್ಯಾರಿಗಳಲ್ಲಿ ವ್ಯಾಪಕವಾಗಿತ್ತು. ಆದರೆ ಧಾರ್ಮಿಕ ಕಟ್ಟುಪಾಡುಗಳ ಒಳಗೂ ಇದು ಸಾಧ್ಯ ಎಂಬುವುದು ಅವರಿಗೆ ಖಚಿತವಾದಾಗ ಒಮ್ಮೆಂದೊಮ್ಮೆಗೆ ಬಹಳಷ್ಟು ಮಸೀದಿಗಳ ಆಡಳಿತದಲ್ಲಿ ಇಂಗ್ಲೀಷ್ ಮಾಧ್ಯಮ ಶಾಲೆಗಳನ್ನು ತೆರೆದು ಇಡೀ ಬ್ಯಾರಿ ಸಮುದಾಯವೇ ಈ ಶಿಕ್ಷಣ ಕ್ರಾಂತಿಗೆ ಚಾಲನೆ ನೀಡಿತು. ಬ್ಯಾರಿಗಳಲ್ಲಿ ನಡೆದ ಅತ್ಯಂತ ರಚನಾತ್ಮಕ ಕ್ರಾಂತಿ ಬಹುಶಃ ಇದೊಂದೇ. ಹೆಣ್ಣು ಮಕ್ಕಳ ಶಿಕ್ಷಣ ನೀಡುವಲ್ಲಿ ತೊಡಕಾಗುವ ಭ್ರಮೆ, ತಲ್ಲಣಗಳನ್ನು ಅವರಿಂದು ಪ್ರಾಯೋಗಿಕವಾಗಿ ಎದುರಿಸಿದ್ದಾರೆ. ಈ ಪ್ರಯತ್ನ ಇನ್ನಷ್ಟು ಯೋಜನಾ ಬದ್ಧವಾಗಿ ನಡೆಯಬೇಕಾಗಿದೆ. ಬ್ಯಾರಿಗಳಲ್ಲಿ ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸುವವರ ಸಂಖ್ಯೆ ಅಪಾರವಾಗಿದೆ. ಕ್ಷುಲ್ಲಕ ಕಾರಣಗಳಿಂದಾಗಿ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸುವ, ಆರ್ಥಿಕ ತೊಂದರೆಗಳಿಂದಾಗಿ ಶಿಕ್ಷಣವನ್ನು ನಿಲ್ಲಿಸುವವರತ್ತ ಆಯಾಯ ಜಮಾತ್‌ಗಳು ಗಮನಿಸುವ ಅಗತ್ಯವಿದೆ. ಹಾಗೆಯೇ ಈ ನಿಟ್ಟಿನಲ್ಲಿ ಇನ್ನೊಂದು ವರ್ಗ ಶಾಲೆಯ ಮೆಟ್ಟಿಲನ್ನೇ ಹತ್ತಲಾಗದೆ, ಬಡತನದ ಬೇಗೆಯಿಂದಲೇ ಜನ್ಮ ತಳೆದು ಹಸಿವು ನೀಗಿಸುವುದಕ್ಕಿಂತ ಮುಂದೆ ಏನನ್ನೂ ಯೋಚಿಸಲಾಗದೆ ಇರುವುದನ್ನು ನಾವು ಗಮನಿಸಬೇಕಾದದು ಕೂಡಾ ಅತ್ಯಂತ ಮುಖ್ಯವಾಗಿರುತ್ತದೆ. ಜೊತೆಗೆ ಬ್ಯಾರಿ ಶಿಕ್ಷಣ ಸಂಸ್ಥೆಗಳು ತಮ್ಮ ಗುಣಮಟ್ಟವನ್ನು ಇತರ ಶಿಕ್ಷಣ ಸಂಸ್ಥೆಗಳ ಮಟ್ಟಕ್ಕೆ ತರುವ ಯತ್ನಗಳೂ ಸಾಗಬೇಕಾಗಿದೆ. ಶಿಕ್ಷಣ ವ್ಯವಸ್ಥೆಯಲ್ಲಿ ಸಮಸ್ಯೆಗಳು ಎದುರಾದಾಗೆಲ್ಲಾ ಅದನ್ನು ರಚನಾತ್ಮಕವಾಗಿ ಬಗೆಹರಿಸುವ ಸಾಂಸ್ಥಿಕ ನಾಯಕತ್ವವೊಂದು ಅವರಿಗೆ ಅಗತ್ಯವಾಗಿದೆ.

ಇನ್ನೊಂದೆಡೆ ಯುವ ಬ್ಯಾರಿಗಳಿಗೆ ಅವರು ಒಪ್ಪುವಂತಹ ಹಾಗೂ ಅವರ ಮನಸ್ಸಿಗೆ ನಾಟುವಂತಹ ಮಾರ್ಗದರ್ಶನದ ಕೊರತೆ ಇರುವುದರಿಂದ ಅವರಲ್ಲಿ ಆರೋಗ್ಯಕರ ಬೆಳವಣಿಗೆಯನ್ನು ನಾವು ಕಾಣುತ್ತಿಲ್ಲ. ಹಾಗೂ ಅನಿಶ್ಚಿತ ಭವಿಷ್ಯ ಅವರನ್ನು ತುಂಬಾ ಕಾಡುತ್ತಿರುವುದನ್ನು ನಾವು ಕಾಣಬಹುದು. ಇದರಿಂದಾಗಿ ಕೆಟ್ಟಚಟಗಳಿಗೆ ಬಲಿಯಾಗುವುದು ಹಾಗೂ ಮಾದಕ ವ್ಯಸನಿಗಳಾಗಿರುವುದನ್ನು ನಾವು ಗಮನಿಸಬಹುದು. ಇಸ್ಲಾಂ ಇಂತಹ ವ್ಯಸನಗಳನ್ನು ಚಟಗಳನ್ನು ಸಂಪೂರ್ಣ ನಿಶೇಧಿಸಿದ್ದರೂ ಕೂಡಾ, ಯುವಕರು ಬಲಿಯಾಗಲು ಕಾರಣವೇನು? ಅದರ ಹಿಂದೆ ಯಾವುದೇ ವ್ಯವಸ್ಥಿತ ಕುತಂತ್ರ ಅಥವಾ ಕೈವಾಡ ಇದೆಯೇ? ಎಂಬುವುದರ ಬಗ್ಗೆ ಕೂಡಾ ನಾವು ವಿಮರ್ಶಿಸುವ ಅಗತ್ಯವಿದೆ.

ಬ್ಯಾರಿಗಳಲ್ಲಿ ಬಹುತೇಕ ಮಂದಿ ಅತ್ಯಂತ ಬಡ ಅಥವಾ ಮಧ್ಯಮ ವರ್ಗಕ್ಕೆ ಸೇರಿದವರು ಅಲ್ಪ ಸಂಖ್ಯಾತ ಬಡವರಿಗಾಗಿ ಇರುವ ಅಸಂಖ್ಯಾತ ಸರಕಾರಿ ಸವಲತ್ತುಗಳು ಅವರಿಗೆ ತಲುಪುತ್ತಿಲ್ಲ. ಅವಿದ್ಯಾವಂತರೇ ಬಹುಸಂಖ್ಯಾತರಾಗಿರುವ ಈ ಸಮುದಾಯದಲ್ಲಿ ಸರಕಾರಿ ಸವಲತ್ತುಗಳ ಬಗ್ಗೆ ದಟ್ಟ ಅಜ್ಞಾನವಿದೆ.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ರೈಸ್ತ, ಜೈನ ಮುಂತಾದ ಅಲ್ಪಸಂಖ್ಯಾತ ಸಮುದಾಯ ಗಣನೀಯ ಸಂಖ್ಯೆಯಲ್ಲಿ ಇರುವುದರಿಂದಲೋ ಏನೋ ಬ್ಯಾರಿಗಳಿಗೆ ಈ ಸವಲತ್ತು ತಲುಪದೇ ಇರುವ ಸಾಧ್ಯತೆಗಳು ಇವೆ. ಬ್ಯಾರಿಗಳ ಸಂಸ್ಥೆಗಳು, ಮುಖ್ಯವಾಗಿ ಮಸೀದಿಗಳ ಜಮಾತುಗಳು ಈ ಬಗ್ಗೆ ಗಮನ ಹರಿಸಬೇಕು. ಸಮುದಾಯದ ಬಡ ಪ್ರತಿಭಾವಂತ ವಿದ್ಯಾರ್ಥಿ-ವಿದ್ಯಾರ್ಥಿನಿಯರಿಗೆ ಈ ಸವಲತ್ತುಗಳು ದೊರೆಯುವಂತೆ ಪರಿಶ್ರಮಿಸಲು ಮುಂದೆ ಬರಬೇಕು. ಒಂದು ರೀತಿಯ ಸಂಘಟಿತ ಯತ್ನ ಜರೂರಾಗಿ ನಡೆಯಬೇಕಾಗಿದೆ. ಇದಕ್ಕೆ ಬೇಕಾದ ಮಾಹಿತಿ ಕೇಂದ್ರಗಳ ಸ್ಥಾಪನೆಯೂ ಅಗತ್ಯವಾಗಿದೆ, ಇಲ್ಲಿ ಉದ್ಯೋಗಾಕಾಂಕ್ಷಿಗಳಿಗೆ ಸೂಕ್ತ ಮಾರ್ಗದರ್ಶನ, ಸಲಹೆ ನೀಡುವ ವ್ಯವಸ್ಥೆಯೂ ಆಗಬೇಕಾಗಿದೆ. ಪ್ರತಿಭಾವಂತ ವಿದ್ಯಾಥಿಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಕೆಲಸಗಳು ಪ್ರತಿ ಜಮಾತಿನಿಂದಲೂ ನಡೆದಾಗ ಒಂದು ಬಗೆಯ ಮೌನಕ್ರಾಂತಿ ಖಂಡಿತವಾಗಿಯೂ ಸಾಧಿತವಾಗುತ್ತದೆ.

ಬ್ಯಾರಿಗಳು ಒಂದೊಂದು ಜಮಾತಿಗೆ ಒಳಪಟ್ಟಿರುತ್ತಾರೆ. ಬ್ಯಾರಿಗಳಲ್ಲಿ ಆ ಜಮಾತಿನ ವ್ಯವಸ್ಥೆ ಇಂದು ಪ್ರಬಲವಾಗಿಯೇ ಇದೆ. ಇದು ನಗರ ಪ್ರದೇಶಗಳಿಗಿಂತ ಹೆಚ್ಚಾಗಿ ಹಳ್ಳಿಗಳಲ್ಲಿ ಸಕ್ರಿಯವಾಗಿದೆ. ಹಾಗಾಗಿ ಪ್ರತಿಯೋರ್ವ ಬ್ಯಾರಿಯೂ ಒಂದು ಸಾಂಸ್ಥಿಕ ವ್ಯವಸ್ಥೆಗೆ ಒಳಪಟ್ಟಿರುತ್ತಾನೆ. ಈಗ ಚಾಲ್ತಿಯಲ್ಲಿರುವ ಜಮಾತ್‌ಗಳು ಬಹುತೇಕ ಮಸೀದಿಗಳು ಆಡಳಿತಕ್ಕಷ್ಟೇ ಸೀಮಿತವಾಗಿದೆ. ಆದರೆ ಅದೇ ವ್ಯವಸ್ಥೆಯನ್ನು ಬ್ಯಾರಿಗಳ ಸಾಮುದಾಯಿಕ ಅಭಿವೃದ್ಧಿಗೆ ಖಂಡಿತವಾಗಿಯೂ ಜಮಾತ್‌ಗಳು ಗಣನೀಯ ಸೇವೆಯನ್ನು ಸಲ್ಲಿಸಬಹುದು. ಜಮಾತ್‌ಗಳ ಒಕ್ಕೂಟ ವ್ಯವಸ್ಥೆಯೊಂದು ಜಾರಿಗೆ ಬಂದರೆ ಆ ಒಕ್ಕೂಟದ ಮೂಲಕ ಹಲವು ಮಹತ್ವದ ಕ್ಷೇಮಾಭ್ಯುದಯ ಕಾರ್ಯಕ್ರಮಗಳನ್ನು ಸಾಧಿಸಬಹುದು. ಜಮಾತ್‌ಗಳ ಒಕ್ಕೂಟ ರಾಜಕೀಯ ರಹಿತವಾಗಿ ಪ್ರಜ್ಞಾವಂತ ನೇತೃತ್ವಹೊಂದಿದ್ದರೆ ಬ್ಯಾರಿ ಸಮುದಾಯ ಎದುರಿಸುವ ತಲ್ಲಣಗಳಿಗೆ ಆರೋಗ್ಯಕರ ಪರಿಹಾರವನ್ನು ಖಂಡಿತವಾಗಿಯೂ ನೀಡಬಹುದು.

ಈ ತನಕ ವಿವರಿಸಿದ ತಲ್ಲಣಗಳೆಲ್ಲವನ್ನೂ ಒಮ್ಮೆಗೆ ಬದಿಗಿಟ್ಟು ಬ್ಯಾರಿ ಸಮುದಾಯದ ಸಾಂಸ್ಕೃತಿಕ, ಐತಿಹಾಸಿಕ ಇತಿಹಾಸದತ್ತ ಒಮ್ಮೆ ಕಣ್ಣು ಹಾಯಿಸಿದರೆ ನಮ್ಮ ಕಣ್ಮುಂದೆ ಬರುವ ಚಿತ್ರಣಗಳು ನಿಜಕ್ಕೂ ಅವಿಸ್ಮರಣೀಯವಾದವುಗಳು. ತಮ್ಮ ಸಾಂಸ್ಕೃತಿಕ, ಧಾರ್ಮಿಕ ಅನನ್ಯತೆಗಳನ್ನು ಉಳಿಸಿಕೊಂಡೇ ಇಲ್ಲಿನ ತುಳುವರೊಂದಿಗೆ, ಕೊಂಕಣಿಯವರೊಂದಿಗೆ ಕನ್ನಡ ಭಾಷಿಕರೊಂದಿಗೆ ಹಾಸು ಹೊಕ್ಕಾಗಿ ಬದುಕಿ ಈ ನೆಲದ ಸಂಸ್ಕೃತಿಯೊಂದಿಗೆ ಸಮರಸವಾಗಿ ಕೂಡಿ ಬಾಳಿದ ಉಜ್ವಲ ಪರಂಪರೆ ಬ್ಯಾರಿಗಳಿಗಿದೆ. ತಮ್ಮ ಮಾತೃಭಾಷೆಯ ಜತೆಗೇ ತುಳು-ಕನ್ನಡ ಎರಡನ್ನೂ ತಮ್ಮದೇ ಭಾಷೆಯೆಂದು ಸ್ವೀಕರಿಸಿದ ಬ್ಯಾರಿಗಳು ಈ ಎರಡೂ ಭಾಷಾ ಸಾಹಿತ್ಯಕ್ಕೆ ಕೊಟ್ಟ ಕೊಡುಗೆಗಳು ಅಪಾರವಾದದ್ದು, ಅನನ್ಯವಾದುದು. ಕನ್ನಡ ಸಾಹಿತ್ಯ ಪ್ರಪಂಚಕ್ಕಂತೂ ಬ್ಯಾರಿಗಳು ನೀಡಿದ ಕೊಡುಗೆಗಳು ಅನಂತವಾದವು. ಒಂದು ವಿಚಾರವಂತೂ ಇಲ್ಲಿ ಅತೀಮುಖ್ಯವಾಗುತ್ತದೆ. ಬ್ಯಾರಿಗಳ ಭಾಷೆ, ಸಂಸ್ಕೃತಿಗೆ ಸುಮಾರು 1200 ವಷಗಳ ಇತಿಹಾಸ ಇರುವುದು ನಿಜವಾದರೂ ಬ್ಯಾರಿಗಳಲ್ಲಿ ತಮ್ಮ ಭಾಷೆ ಸಂಸ್ಕೃತಿಗಳ ಬಗ್ಗೆ ಒಂದು ಬಗೆಯ ಸಾಂಸ್ಕೃತಿಕ ಎಚ್ಚರ ಹುಟ್ಟಿಕೊಂಡದ್ದು ಮಾತ್ರ ಇತೀಚೆಗಿನ ವರ್ಷಗಳಲ್ಲಿ ಎಂಬುವುದು ಗಮನಾರ್ಹ. ಒಂದು ಕಾಲದಲ್ಲಿ “ಬ್ಯಾರಿ” ಎಂಬ ಪದವನ್ನು ಹೆಸರಿನೊಂದಿಗೆ ಅಭಿಮಾನದಿಂದ ಬಳಸುತ್ತಿದ್ದ ಬ್ಯಾರಿಗಳು ಬರಬರುತ್ತಾ “ಬ್ಯಾರಿ” ಎಂಬ ಪದವೇ ತಮ್ಮ ಕೀಳರಿಮೆಯ ದ್ಯೋತಕವೆಂದು ಭಾವಿಸಿದ್ದು ಸುಳ್ಳಲ್ಲ. ಆದರೆ ಬ್ಯಾರಿಗಳು ತಮ್ಮ ತಪ್ಪನ್ನು ಬೇಗನೆ ತಿದ್ದಿಕೊಂಡು “ಬ್ಯಾರಿ” ಎಂಬುವುದು ತಮ್ಮ ಸಾಂಸ್ಕೃತಿಕ ಹೆಗ್ಗುರುತೆಂಬುವುದನ್ನು ಅರಿತಾಗಲೇ ಬ್ಯಾರಿ ಹೆಸರಿನ ಸಂಘ-ಸಂಸ್ಥೆಗಳು ಹುಟ್ಟಿಕೊಂಡವು. ಈ ನಿಟ್ಟಿನಲ್ಲಿ ಬೆಂಗಳೂರಿನ ನಮ್ಮ ಮಿತ್ರರು ಹುಟ್ಟುಹಾಕಿದ “ದ ಬ್ಯಾರೀಸ್ ವೆಲ್‌ಫೇರ್ ಅಸೋಸಿಯೇಶನ್”ನ ಶ್ರಮ ಸಾಧನೆಗಳು ಅತ್ಯಂತ ಪ್ರಭಾವ ಪೂರ್ಣವಾಗಿ ಬ್ಯಾರಿಗಳಲ್ಲಿ

ತಮ್ಮ ಕೀಳರಿಮೆಯನ್ನು ತೊಡೆದು ಹಾಕುವಲ್ಲಿ ಯಶಸ್ವಿಯಾದುದನ್ನು ನಾವಿಲ್ಲಿ ಮಹತ್ವದೆಂದೇ ಪರಿಗಣಿಸಬೇಕಾಗುತ್ತದೆ. ಈ ಸಂಸ್ಥೆಯ ಸ್ಫೂರ್ತಿ ಮತ್ತು ಮೇಲ್ಪಂಕ್ತಿಯೊಂದಿಗೆ ಇತರ ಬ್ಯಾರಿ ಸಂಸ್ಥೆಗಳು ಹುಟ್ಟಿ ಬ್ಯಾರಿ, ಭಾಷೆ, ಸಂಸ್ಕೃತಿಗಳ ಎಚ್ಚರ ಮೂಡಿಸಿತು. "ಬ್ಯಾರಿ ಸಾಹಿತ್ಯ ಮತ್ತು ಸಾಂಸ್ಕೃತಿ ಸಂಘ" ಮಂಗಳೂರು ಈ ನಿಟ್ಟಿನಲ್ಲಿ ಸಾಧಿಸಿದ ಸಾಧನೆಗಳೂ ಅವಿಸ್ಮರಣೀಯ. ಈ ನಿಟ್ಟಿನಲ್ಲಿ ನಡೆದ ಬ್ಯಾರಿ ಸಾಹಿತ್ಯ ಸಮ್ಮೇಳನಗಳು ಬ್ಯಾರಿಗಳ ಸಾಹಿತ್ಯಾಭಿರುಚಿ, ಶಿಸ್ತು, ಸಾಂಸ್ಕೃತಿಕ ಎಚ್ಚರಗಳಿಗೆ ಸಾಕ್ಷಿಯಾಗಿ ಜನ ಮನ್ನಣೆಗಳಿಸಿತು. ತಮಗೂ ಒಂದು ಸಮೃದ್ಧ ಸಂಸ್ಕೃತಿಯಿದೆ, ಭಾಷೆಯಿದೆ, ಜಾನಪದ ಸಂಪತ್ತಿದೆ, ಸಾಹಿತ್ಯದ ಹಿರಿಮೆಯಿದೆ-ಎಂಬ ಎಚ್ಚರ ಈ ಸಮುದಾಯದಲ್ಲಿ ಹುಟ್ಟಿದಾಗ ಅಳಿದು ಹೋಗುತ್ತಿರುವ ಈ ಭಾಷೆ , ಸಂಸ್ಕೃತಿಗೆ ಮರುಜೀವ ನೀಡಿ ಪೋಷಿಸುವ ಕಾರ್ಯಕ್ಕೆ ಸಮಗ್ರ ಬ್ಯಾರಿ ಸಮುದಾಯ ಕೈ ಜೋಡಿಸಿತು. ಬ್ಯಾರಿಗಳಲ್ಲಿ ಬರಹಗಾರರು, ಕವಿಗಳು, ಕಲಾಕಾರರು, ಒಮ್ಮಿಂದೊಮ್ಮೆ ಹುಟ್ಟಿಕೊಂಡು ಭಾಷಾ, ಸಂಸ್ಕೃತಿಗಳ ಬಗೆಗಿನ ಚಿಂತನೆಗೆ ಚಾಲನೆ ನೀಡಿದರು. ಈ ಸಾಂಸ್ಕೃತಿಕ, ಸಾಹಿತ್ಯಿಕ ಕ್ರಾಂತಿಯೇ "ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ"ಯ ಉದಯಕ್ಕೆ ಕಾರಣವಾಯಿತು. ಕಳೆದ ಎರಡು-ಮೂರು ವರ್ಷಗಳ ಅವಧಿಯಲ್ಲಿ "ಬ್ಯಾರಿ ಸಾಹಿತ್ಯ ಅಕಾಡೆಮಿ" ತನ್ನ ಅನವರತ ಕಾರ್ಯಕ್ರಮಗಳ ಮೂಲಕ ಈ ಸಮುದಾಯದಲ್ಲೊಂದು ಸಂಚಲನವನ್ನು ಹುಟ್ಟು ಹಾಕಿದ್ದನ್ನು ಬ್ಯಾರಿಗಳ ದೊಡ್ಡ ವರ್ಗವೊಂದು ಖಂಡಿತಕ್ಕೂ ಗುರುತಿಸಿ ಮತ್ತು ಇಡೀ ಕರ್ನಾಟಕವೇ ಈ ಅಕಾಡೆಮಿಯನ್ನು ಮುಕ್ತಕಂಠದಿಂದ ಕೊಂಡಾಡಿದೆ.

ಬ್ಯಾರಿಗಳು ತಮ್ಮನ್ನು ಆವರಿಸಿರುವ ಎಲ್ಲಾ ತಲ್ಲಣಗಳನ್ನೂ ಶೈಕ್ಷಣಿಕ ಜಾಗೃತಿಯ ಮೂಲಕ ನಿವಾರಿಸಿಕೊಳ್ಳುತ್ತಾ ಮುಂದೆ ಬರುತ್ತಿದ್ದಾರೆ. ಈ ನಿಟ್ಟಿನಲ್ಲಿ ಗಲ್ಫ್ ರಾಷ್ಟ್ರದಲ್ಲಿರುವ ನಮ್ಮ ಮಿತ್ರು ತಮ್ಮ ಹುಟ್ಟೂರ ಶೈಕ್ಷಣಿಕ, ಸಾಮಾಜಿಕ ಮನ್ನಣೆಗೆ ನಿರಂತರ ನೆರವು ನೀಡಿದ್ದಾರೆ. ಹಲವು ತೊಡಕುಗಳಿದ್ದರೂ ಬ್ಯಾರಿ ಸಂಘ-ಸಂಸ್ಥೆಗಳು ಇಂದು ಹಿಂದಿಗಿಂತ ಸಕ್ರಿಯವಾಗಿದೆ. ಚಲನಶೀಲಗುಣವುಳ್ಳ, ಸಾಹಸಿ ಪ್ರವೃತಿಯುಳ್ಳ ಉದ್ಯಮಶೀಲತೆಗೆ ಹೆಸರಾದ, ಪ್ರತಿಭೆಗಳಿಗೆಂದೂ ಕೊರತೆಯಿಲ್ಲದ ಸೌಹಾರ್ಧತೆಗೆ ನಿರಂತರ ಹಾತೊರೆಯುವ, ನಾಡು ನುಡಿಗಳ ಬಗ್ಗೆ ಅಪಾರ ಗೌರವವಿರುವ ಬ್ಯಾರಿ ಸಮುದಾಯಕ್ಕಿಂದು ಬೇಕಾಗಿರುವುದು ಒಂದು ಬಗೆಯ ಪ್ರಜ್ಞಾವಂತ ಪ್ರಾಮಾಣಿಕ ನಾಯಕತ್ವ, ಸರಕಾರದ ಸಹಾಯ, ತಮ್ಮ ದೌರ್ಬಲ್ಯಗಳನ್ನು ಮೀರಿ ನಿಲ್ಲುವ ರಚನಾತ್ಮಕ ಪರಿಶ್ರಮ, ಒಮ್ಮದತ್ತ ಸೀಮೊಲಂಘನೆ, ಹೊಸ ಜಗದ ಸವಾಲುಗಳನ್ನೆದುರಿಸುವ ಧೀಮಂತಿಕೆ.

"ಒಮ್ಮತದಳೇಕ ಪಂಥವ ಹಿಡಿದು ಸಾಗುವೆವು ಸೋದರರು ಕ್ಷಮಿಸೆಮ್ಮ ಬಡಿದಾಡೆವು" ಎಂಬ ಕವಿ ಕಿಂಞಣ್ಣ ರೈಯವರ ಕವಿವಾಣಿ ಆತ್ಮನಿರೀಕ್ಷಣೆಯೊಂದಿಗೆ ಮುನ್ನಡೆಯಲು ನಮಗೆ ಸಹ ಪ್ರೇರಣೆಯಾಗಲಿ ಎಂಬ ಹಾರೈಕೆಯೊಂದಿಗೆ.

----------------ಜೈ ಹಿಂದ್, ಜೈ ಕರ್ನಾಟಕ----------------